ದಿನಾಂಕಃ 14-06-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ನಾನು 1 ನೇ ವಾದಿ ಪರ ಸಾಕ್ಷಿ ಹೇಳಲು ಬಂದಿದ್ದೇನೆ. ಅವರು ಜಮೀನಿನ ಸೀಮೆ ಗುರುತಿಸುವ ಸಲುವಾಗಿ ನ್ಯಾಯಾಲಯಕ್ಕೆ ಬಂದಿದ್ದಾರೆ. ಅವರ ಜಮೀನು ಕೆಂಗಲ ಗ್ರಾಮದಲ್ಲಿ ಇದೆ. ಸರ್ವೆ ನಂ. 85/1 ಮತ್ತು 2 ಕ್ಕೆ ವಿಚಾರವಾಗಿ ಅದು 1 ನೇ ವಾದಿಗೆ ಸೇರಿದ್ದು. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ ಅಲ್ಲ. ಈ ದಾವೆಯನ್ನು ಯಾರ ವಿರುದ್ಧ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತನ್ನು ನೋಡಿದ್ದೇನೆ ಅದನ್ನು ಗುತ್ತಿಗೆ ಆಧಾರದ ಮೇಲೆ ನಾನು ಮಾಡುತ್ತಿದ್ದೇನೆ. 1 ನೇ ವಾದಿಯು ಸುಳ್ಳು ದಾವೆ ಸಲ್ಲಿಸಿದ್ದಾರೆ ಅದಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ ಅಲ್ಲ. ದಾವಾ ಸ್ವತ್ತಿನ ಹದ್ದುಬಸ್ತು ಎಲ್ಲ ಸರಿಯಾಗಿ ಇದೆ ಎಂದರೆ ಸರಿ ಅಲ್ಲ. ವಾದಿಯರು ಹೆಚ್ಚಿನ ಜಮೀನು ಕೇಳುತ್ತಿದ್ದಾರೆ ಎಂದರೆ, ಸಾಕ್ಷಿಯು ಸೀಮೆ ಗುರುತಿಸುವ ಸಲುವಾಗಿ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ.

ನಾನು ವಾದಿಯರ ಸ್ವತ್ತಿನ ಪಹಣಿ ನೋಡಿಲ್ಲ. ದಾವಾ ಸ್ವತ್ತು 2 ಎಕರೆ 65 ಸೆಂಟ್ಸ ಇದೆ. ಅದು ಎರಡು ಜನ ವಾದಿಯರಿಗೆ ಸೇರಿದ್ದು. ಅದು ಎರಡು ಪಟ್ಟಿಗಳು ಇರುವ ಜಮೀನು ಇದೆ. ದಾವಾ ಸ್ವತ್ತಿನ ಖರೀದಿ ಪತ್ರವನ್ನು ನಾನು ನೋಡಿಲ್ಲ ದಾವಾ ಸ್ವತ್ತಿನ ಕ್ಷೇತ್ರವು ಅದರಲ್ಲಿರುವ ದಾರಿಯನ್ನು ಸೇರಿಸಿ ಇದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ, ನಾನು ವಾದಿಯರ ಪರವಾಗಿ ಸುಳ್ಳು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ ಅಲ್ಲ. ವಾದಿಯರ ದಾವಾ ಸ್ವತ್ತಿನ ವಿಸ್ತೀರ್ಣ ಅವರ ಬಳಿ ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ದಾರಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ವಿಷಯಗಳನ್ನು ಬರೆಸಿದ್ದೇನೆ ಎಂದರೆ ಸರಿ ಅಲ್ಲ.

ವಾದಿಯರ ಜಮೀನನ್ನು ಅಳತೆ ಮಾಡುವಾಗ ನಾನು ಮೊದಲು ಇದ್ದೆ. ಆಗ ರವೀಕುಮಾರ ಎನ್ನುವವರು ಇದ್ದರು, ಅವರು ಈಗ ಮೃತಪಟ್ಟಿದ್ದಾರೆ. ಅಳತೆಗೆ ಬಂದಾಗ ಭೂ ಮಾಪಕರು ಪಂಚನಾಮೆಗೆ ಸಹಿ ಪಡೆದಿದ್ದಾರೆ. ಆ ಪಂಚನಾಮೆಯನ್ನು ನಮಗೆ ಓದಿ ಹೇಳಿದ್ದಾರೆ. ಆದರೆ ಅದನ್ನು 2017 ರಲ್ಲಿ ಜರುಗಿಸಿದ್ದರಿಂದ ಈಗ ಅದರಲ್ಲಿ ಏನು ಬರೆದಿದ್ದಾರೆ ಹೇಳಲಾಗುವುದಿಲ್ಲ. ವಾದಿಯರ ಖರೀದಿ ಪತ್ರಕ್ಕೂ ಮತ್ತು ಸರ್ವೇ ಮಾಡಿದ್ದಕ್ಕೂ ಹೊಂದಾಣಿಕೆ ಇಲ್ಲ ಎಂದರೆ, ಸಾಕ್ಷಿಯು ಸೀಮೆ

ಕಲ್ಲುಗಳ ಆಧಾರದ ಮೇಲೆ ಸರ್ವೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರ ಜಮೀನನ್ನು ನಾನು ಗುತ್ತಿಗೆ ಆಧಾರದ ಮೇಲೆ ಮಾಡುತ್ತಿದ್ದರಿಂದ ಅವರಿಗೆ ಅನುಕೂಲ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.